**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1480/2022**

**ಚಾ.ಸಾ. - 2**
**ಪ್ರಾ.ಸಾ. - 2**

**ಸಾಕ್ಷಿದಾರರ ಹೆಸರು** ಃ ದುಂಡಯ್ಯ ಸಂಗಯ್ಯ ಹಿರೇಮಠ

**ಸಾಕ್ಷಿದಾರರ ವಯಸ್ಸು** ಃ 45 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ವ್ಯವಸಾಯ

**ಸಾಕ್ಷಿದಾರರ ವಿಳಾಸ** ಃ ಗುಡಿಕಟ್ಟಿ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 17-04-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಚಾಸಾ-3 ರವರ ಪರಿಚಯ ಇರುವುದಿಲ್ಲ. ಈಗ ಸುಮಾರು 1 ವರ್ಷದ ಹಿಂದೆ ದೊಡವಾಡ ಪೊಲೀಸರು ಠಾಣೆಗೆ ಕರೆಯಿಸಿ ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದು ಪೋಟೋತೆಗೆಯಿಸಿರುತ್ತಾರೆ. ಅದು ಯಾವಾ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ದಾಖಲೆಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದುಸದರಿ ದಾಖಲೆಗಳು ಅಪಘಾತ ಸ್ಥಳ ಪಂಚನಾಮೆಯೊಂದಿಗೆ ಕಚ್ಚಾ ನಕಾಶೆ ಮತ್ತು ವಾಹನ ತಡೆ ಪಂಚನಾಮೆಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಬಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 4 ರಿಂದ 7 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಅಪಘಾತ ಸ್ಥಳ ಹಾಗೂ ವಾಹನ ತಡೆ ಪಂಚನಾಮೆ ಮಾಡಿರುವುದಿಲ್ಲ ಯಾವುದೇ ವಾಹನವನ್ನು ವಶಕ್ಕೆ ಪಡೆದಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿ ಅವರಿಂದ**

ದಿಃ 10-03-2022 ರಂದು ಪೊಲೀಸರು ನನ್ನನ್ನು ಬೆಳವಡಿ ಗ್ರಾಮದ ಖಂಡೋಜಿ ಇವರ ಜಮೀನಿನ ಹತ್ತಿರ ಇರುವ ರಸ್ತೆಯ ಮೇಲೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-7 ರವರು ಹಾಜರಿದ್ದು ಸ್ಥ.ಳತೋರಿಸಿದ ಮೇರೆಗೆ ಬೆಳಿಗ್ಗೆ 9.00 ರಿಂದ 9.45 ಗಂಟೆ ವರೆಗೆ ನಿಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ಸಹಿ ಪಡೆದು ಕಚ್ಚಾ ನಕಾಶೆಯನ್ನು ತಯಾರಿಸಿ ಅದಕ್ಕೂ ಸಹಿ ಪಡೆದು ನಿಪಿ-4 ಮತ್ತು 5 ರಂತೆ ಬಾವಚಿತ್ರವನ್ನು ತೆಗೆಯಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮರಳಿ ನಮ್ಮನ್ನು ದೊಡವಾಡ ಠಾಣೆಗೆ ಕರೆದುಕೊಂಡು ಬಂದುಚಾಸಾ-7 ರವರು ತೋರಿಸಿದ ಠಾಣಾ ಆವರಣದಲ್ಲಿದ್ದ ಮೋಟರಸೈಕಲ ನಂ. ಕೆಎ24ಎಕ್ಸ 9158 ಇದರ ವಾಹನ ತಡೆ ಪಂಚನಾಮೆಯನ್ನು 10.00 ಗಂಟೆ ಯಿಂದ 10.30 ಗಂಟೆ ವರೆಗೆ ನಿಪಿ-3 ರಂತೆ ಮಾಡಿ ನನ್ನ ಸಹಿ ಪಡೆದು ನಿಪಿ- 6 ಮತ್ತು 7 ನ್ನು ತೆಗೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ